ಕಪ್ಪು ಅರಿಶಿನ ಸೇರಿ ಜಿಕೆವಿಕೆಯಿಂದ 5 ವಿನೂತನ ತಳಿ ಆವಿಷ್ಕಾರ

ಧಾನ್ಯಜೋಳ ಸಿಎನ್‌ಜೆಎಸ್-1 ಶತ ದಿನದಲ್ಲಿ ಕಟಾವಿಗೆ | ಕಪ್ಪು ಅರಿಶಿನದಿಂದ ಹೆಕ್ಟೇರ್‌ಗೆ 10 ಟನ್ ಇಳುವರಿ | ಲಾಭದಾಯಕ ತಳಿ ಪರಿಚಯ

ಸುಧಾರಿತ ಕೃಷಿ ಯಂತ್ರೋಪಕರಣ ಪ್ರದರ್ಶನ | ನ.13ರಿಂದ 16ರ ವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ಜಿಕೆವಿಕೆ ಕೃಷಿ ಮೇಳದಲ್ಲಿ ಅನಾವರಣ

■ ರಘು ಕೆ.ಜೆ.

ಉದಯವಾಣಿ ಸಮಾಚಾರ

ಬೆಂಗಳೂರು: ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ(ಜಿಕೆವಿಕೆ)ದಲ್ಲಿ ನ.13 ರಿಂದ 16 ರವರೆಗೆ ನಡೆಯಲಿರುವ ಈ ಬಾರಿಯ ಬಹುನಿರೀಕ್ಷಿತ ಕೃಷಿ ಮೇಳದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಸಂಶೋಧನೆ ಮೂಲಕ ಅಭಿವೃದ್ಧಿಪಡಿಸಿದ ರೈತರಿಗೆ ಲಾಭದಾಯಕ ಹಾಗೂ ಅಧಿಕ ಇಳುವರಿ ತಂದುಕೊಡುವ ಒಟ್ಟು ವಿವಿಧ 5 ವಿನೂತನ ತಳಿಗಳು ಅನಾವರಣಗೊಳ್ಳಲಿವೆ.

ಇದರಲ್ಲಿ ವಿಶೇಷವಾಗಿ ಉತ್ಕೃಷ್ಟ ನೀಲಿ ತಿರುಳು ಹೊಂದಿದ ಸಿಎಚ್‌ಎನ್‌ಬಿಟಿ-1 ತಳಿಯ ಕಪ್ಪುಅರಿಶಿನ, ಬಿಸಿಎಚ್-162 ತಳಿಯ ಹರಳುಕಾಳು, ಕೆಬಿಎಸ್‌ಎಚ್-88 ತಳಿಯ ಸೂರ್ಯಕಾಂತಿ, ಐಐಎಸ್‌ಆರ್ ಪ್ರತಿಭಾ ತಳಿಯ ಹಳದಿ ಅರಿಶಿನ ಮತ್ತು ಸಿಎನ್‌ಜೆಎಸ್-1 ತಳಿಯ ಧಾನ್ಯದ ಜೋಳವನ್ನು ಜಿಕೆವಿಕೆ ವಿಜ್ಞಾನಿಗಳ ತಂಡವು ಪ್ರಾಯೋಗಿಕ ಸಂಶೋಧನೆ ಮೂಲಕ ಅಭಿವೃದ್ಧಿಪಡಿಸಿದ್ದು, ಈ ಬಾರಿಯ ಮೇಳದಲ್ಲಿ ಲೋಕಾರ್ಪಣೆಗೊಳ್ಳಲು ಸಜ್ಜಾಗಿ ನಿಂತಿವೆ.

ಕಪ್ಪುಅರಿಶಿನ ಹೆಚ್ಚು ವಿಭಿನ್ನತೆ: ಈ ಬಾರಿಯ ಮೇಳದಲ್ಲಿ ಪರಿಚಯಿಸುತ್ತಿರುವ ವಾಣಿಜ್ಯ ಕೃಷಿ ಉತ್ಪನ್ನ ತಳಿಗಳಲ್ಲಿ ಆಯುರ್ವೇದ ಹಾಗೂ ಔಷಧೀಯ ಗುಣ ಅಮೂಲಾಗ್ರವಾಗಿರುವ ಸಿಎಚ್‌ಎನ್‌ಬಿಟಿ-1 ತಳಿಯ ಕಪ್ಪುಅರಿಶಿನ ಹೆಚ್ಚು ವಿಭಿನ್ನತೆ ಹೊಂದಿದೆ. ಇದು ನೋಡಲು ಮಾಮೂಲಿ ಅರಿಶಿನದಂತೆ ಕಂಡರೂ ಒಳಭಾಗದಲ್ಲಿ ಉತ್ಕೃಷ್ಟವಾದ ನೀಲಿ ತಿರುಳನ್ನು ಹೊಂದಿದ್ದು ರೈತರಿಗೆ ಹೆಚ್ಚು ಲಾಭದಾಯಕವಾಗಲಿದೆ.

ಸಿಎಚ್‌ಎನ್‌ಬಿಟಿ-1 ತಳಿಯ ಕಪ್ಪುಅರಿಶಿನವು ಗಾಢವಾದ ನೀಲಿಬಣ್ಣವನ್ನು ಹೊಂದಿದೆ. ಹೆಚ್ಚಾಗಿ ಆಯುರ್ವೇದ ಮತ್ತು ಔಷಧೀಯ, ಕಾಂತಿವರ್ಧಕ ಗುಣ ರಪ್ಪು ಅಧಿಕ ಎಣ್ಣೆಯ ಇಳುವರಿ (9.5-10 ಕ್ವಿಂಟಾಲ್) ನೀಡಲಿದೆ.

> ಸಮೃದ್ಧ ಕೃಷಿ ವಿಕಸಿತ ಭಾರತ-ನೆಲ-ಜಲ ಬೆಳೆ ಎಂಬ ಘೋಷವಾಕ್ಯದೊಂದಿಗೆ ಈ ಬಾರಿಯ ಕೃಷಿ ಮೇಳವು ನ.13 ರಿಂದ 16 ರವರೆಗೆ ಒಟ್ಟು ನಾಲ್ಕು ದಿನಗಳವರೆಗೆ ಕೃಷಿ ಮೇಳ ನಡೆಯಲಿದೆ. ಸಾವಯವ ಹಣ್ಣು-ತರಕಾರಿ ಜೊತೆಗೆ ಸುಧಾರಿತ ಬೇಸಾಯ ಪದ್ಧತಿಗಳು ಹಾಗೂ ಕೃಷಿ ತಂತ್ರಜ್ಞಾನವನ್ನು ರೈತರಿಗೆ ಪರಿಚಯಿಸಲಾಗುವುದು.
> ● ಡಾ.ಎಸ್.ವಿ.ಸುರೇಶ್, ಬೆಂಗಳೂರು ಕೃಷಿ ವಿವಿ ಕುಲಪತಿ

> ಹರಳುಕಾಳು ಕೃಷಿಯು ಉಪಬೆಳೆಯಾಗಿಯೂ ರೈತರಿಗೆ ಆದಾಯ ತಂದುಕೊಡಲಿದೆ. 2018 ರಿಂದ 255 ಕ್ಕೂ ಹೆಚ್ಚು ಹರಳು ತಳಿಗಳ ಸಂಶೋಧನೆ ನಡೆಸಿದ್ದು ಅಂತಿಮವಾಗಿ ಹೈಬ್ರೀಡ್ ಬಿಸಿಎಚ್-162 ಹರಳು ಸಂಕರಣ ತಳಿಯನ್ನು ರೈತರಿಗೆ ಶಿಫಾರಸು ಮಾಡಲಾಗಿದೆ. ಪ್ರತಿ ಹೆಕ್ಟೇರ್‌ಗೆ 20 ಕ್ವಿಂಟಾಲ್ ನಷ್ಟು ಇಳುವರಿ ನೀಡಲಿದೆ.
> ● ಡಾ.ಯಮನೂರು, ಹರಳು ಬಿಸಿಎಚ್-162 ತಳಿವಿಜ್ಞಾನಿ, ಜಿಕೆವಿಕೆ

ನೂತನ ತಳಿಗಳ ವಿಶೇಷತೆಗಳು..!

■ **ಕಪ್ಪುಅರಿಶಿನ ಸಿಎಚ್‌ಎನ್‌ಬಿಟಿ-1**
ಈ ತಳಿಯಲ್ಲಿ ಗೆಡ್ಡೆಗಳು ದಪ್ಪವಾಗಿದ್ದು ಉತ್ಕೃಷ್ಟವಾದ ನೀಲಿ ತಿರುಳನ್ನು ಹೊಂದಿರಲಿದೆ. ಪ್ರತಿ ಹೆಕ್ಟೇರ್‌ಗೆ 8 ರಿಂದ10 ಟನ್ ತಾಜಾ ಗೆಡ್ಡೆಗಳ ಇಳುವರಿ ಪಡೆಯಬಹುದು. ಈ ತಳಿಯು 255 ರಿಂದ 265 ದಿನಗಳಲ್ಲಿ ಕಟಾವಿಗೆ ಬರಲಿದೆ.

■ **ಧಾನ್ಯಜೋಳ ಸಿಎನ್‌ಜೆಎಸ್-1**

ಈ ತಳಿಯು ಮಧ್ಯಮ ಎತ್ತರದ ಮಧ್ಯಮಾವಧಿ ತಳಿಯಾಗಿದ್ದು 100 ರಿಂದ 105 ದಿನಗಳಲ್ಲಿ ಕಟಾವಿಗೆ ಬರಲಿದೆ. ಪ್ರತಿ ಹೆಕ್ಟೇರ್‌ಗೆ 39 ರಿಂದ 42 ಕ್ವಿಂಟಾಲ್ ಧಾನ್ಯದ ಇಳುವರಿ ಜೊತೆಗೆ 30 ರಿಂದ 33 ಟನ್ ಮೇವಿನ ಇಳುವರಿಯನ್ನು ಪಡೆಯಬಹುದು. ಕಟಾವಿನ ಸಮಯದಲ್ಲೂ ಈ ಗಿಡಗಳು ಹಸಿರಿನಿಂದ ಕೂಡಿರಲಿವೆ.

■ **ಸೂರ್ಯಕಾಂತಿ ಸಂಕರಣ ಕೆಬಿಎಸ್‌ಎಚ್-88**
84 ರಿಂದ 86 ದಿನಗಳ ಅಲ್ಪಾವಧಿಯ ಸಂಕರಣ(ಬ್ರೀಡ್) ತಳಿಯಾಗಿದೆ. ಕೇದಿಗೆ ರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿದ್ದು, ಈ ತಳಿಯು ಶೇ.19 ರಷ್ಟು ಬೀಜದ ಇಳುವರಿ (ಪ್ರತಿ ಹೆಕ್ಟೇರ್‌ಗೆ 22 ರಿಂದ 24 ಕ್ವಿಂಟಾಲ್)ಹಾಗೂ ಶೇ.28

■ **ಹರಳುಕಾಳು ಸಂಕರಣ ಬಿಸಿಎಚ್-162**
ಒಣಬೇಸಾಯಕ್ಕೆ ಸೂಕ್ತ ಮಧ್ಯಮಾವಧಿ ಸಂಕರಣ ತಳಿಯಾಗಿದ್ದು ಪ್ರತಿ ಹೆಕ್ಟೇರ್‌ಗೆ 15 ರಿಂದ 20 ಕ್ವಿಂಟಾಲ್ ಇಳುವರಿ ನೀಡಲಿದೆ. ಶೇ.47 ರಿಂದ 48ರಷ್ಟು ಎಣ್ಣೆಯ ಅಂಶವನ್ನು ಹೊಂದಿದ್ದು ಮುಳ್ಳುಸಹಿತ ಕಾಯಿಗಳ ಗಿಡಗಳ ಕಾಂಡ ಹಸಿರು ವರ್ಣದಾಗಿದೆ. ಮೊದಲ ಗೊಂಚಲು ಮಾಗಲು 95-100 ದಿನಗಳು ಬೇಕಾಗಲಿದೆ. ಕಾಳುಗಳು ಸಿಡಿಯುವಿಕೆ ನಿರೋಧಕತೆಯನ್ನು ಹೊಂದಿದೆ. ಗೊನೆಗಳಲ್ಲಿ ಶೇ 90 ಮಹಿಳಾ ಪರಾಗ ಹೂವುಗಳನ್ನು ಹೊಂದಿದ್ದು ಹೆಚ್ಚು ಇಳುವರಿ ನೀಡಲಿದೆ.

■ **ಅರಿಶಿನ ಐಐಎಸ್‌ಆರ್ ಪ್ರತಿಭಾ**

ಈ ತಳಿಯು 240 ರಿಂದ 245 ದಿನಗಳಲ್ಲಿ ಕಟಾವಿಗೆ ಬರಲಿದೆ. ಹೆಕ್ಟೇರ್‌ಗೆ 34ರಿಂದ 36 ಟನ್ ಗೆಡ್ಡೆಗಳ ಇಳುವರಿ ಪಡೆಯಬಹುದು. ಶೇ.20 ಸಂಸ್ಕರಣಾ ಸಾಮರ್ಥ್ಯ ಹೊಂದಿದ್ದು ಉತ್ಕೃಷ್ಟವಾದ ಕೆಂಪು ಹಳದಿ ಬಣ್ಣದ ತಿರುಳು ಹೊಂದಿರಲಿದೆ.

Udayavani pg 10

Eyeing aspiring farmers, agriculture varsity to launch paid consultancy service

B.S. Satish Kumar
BENGALURU

Here is some good news for urbanites who are keen to take up farming, but do not have the expertise and experience to venture into it. With a focus on week-end farmers and those who are new to farming, the University of Agricultural Sciences-Bengaluru (UAS-B) is set to introduce paid consultancy services.

"The university's experts and scientists will provide a cropping system plan for farmers depending upon the size and nature of their fields, as well as their requirements and investment potential. We are going to prescribe a fee for preparing such a plan," says UAS-B Vice-chancellor S.V. Suresha.

"If necessary, experts would visit the field. It will be similar to architects preparing a building plan and visiting the site where certain amount of money would be charged for each visit," Dr. Suresha told *The Hindu*.


The university has already received requests from close to 20 persons for consultancy services. FILE PHOTO

The plan would be as per their requirement and also availability of labour

The plan would be as per their requirement and also availability of labour. Experts would also suggest mechanisation options.

The university came up with the idea following feedback from the monthly *santhes* (shandies) being organised on its GKVK campus in Bengaluru where innovative farmers and farmers' organisations are allowed to sell their produce on the fourth Saturday of every month.

"The consumers, who visit the *santhes*, also comprise IT and corporate employees, and other professionals from urban areas who have either recently bought farm land, or want to become farmers. Some of them are week-end farmers. They contacted us during the *santhes* and wanted to know if we can help them," explained the Vice-Chancellor.

"They are not traditional farmers who just want technical guidance. These are people who do not have hands-on experience. Hence, we thought of introducing paid consultancy services."

The university has already received requests from close to 20 persons for consultancy services. "We are classifying their requirements and, accordingly, will assign relevant experts. To begin with, we are going to set up a consultancy desk at the university within a month for people to contact us online. They can submit relevant details about their land's maps, nature and their requirements," he said.

In five districts

The service will be for offered in Bengaluru Urban, Bengaluru Rural, Bengaluru South (formerly Ramanagara), Chickballapur, and Kolar districts.

The Vice-Chancellor is optimistic that the service would spur innovation in farming, particularly marketing, as such urban professionals are good in building a brand for their produce through online platforms. The university is keen to promote organic farming methods through them.

A lot of urbanites, who took to farming during COVID days, are not active in agriculture now, Dr. Suresha pointed out, and hoped that the new service would help rekindle interest.

Hindu pg 02

Malihabad's famed Dussehri faced early ripening and climate crises this season, but a resilient cultivar offers hope

When Tommy met Neelam and Abhaya was born



Abhaya mango trees in CISH orchard, Malihabad

Neha.Shukla@timesofindia.com

Malihabad, in UP's Lucknow district, had mangoes "raining" in its orchards this season. Dussehris started dropping off trees on their own, 10 days before the usual ripening date, creating a scarcity of the much sought-after variety, which usually hits the market around June 10, and remains available till end-July.

The culprit, of course, was climate change. For the past five years or so, the town — famous for its mangoes, most notably the Dussehri — has been feeling the pinch of weather pattern changes: untimely rains, unseasonal thunderstorms and pest attacks. But a hybrid variety promises a solution.

A Hybrid Game Changer

Enter Abhaya (the fearless). Developed at a Central Institute for Subtropical Horticulture (CISH) laboratory, the cross between Indian variety Neelam and American Tommy Atkins has been developed specifically to withstand vagaries of nature. And it has been trialled in Maharashtra, Odisha, UP and other states, before being released to farmers.

In field trials, Abhaya has not only proved that it can resist changes in temperature and rainfall patterns, but it has also shown that it has a shelf life of 12-15 days after ripening, much longer than the average mango's 2-5 days — which reduces post-harvest losses, opening up export opportunities to distant markets, including the Middle-East, Europe, and South-East Asia.

"The Abhaya variety has been released after extensive trials and screening for over 20 years," says CISH director T Damodaran.

Abhaya has inherited several desirable qualities, apart from wider adaptability. Tommy Atkins, like many foreign varieties, has an attractive red colour, which ups its export potential. Abhaya, besides taking on Tommy's colour, has also got firmness from it. And, like Neelam, it's rich in nutrients and flavour.

Abhaya, say scientists, is expected to expand the mango season in UP, which otherwise ends late Aug. Its firmness gives it a better handling quality, making shipping easier. Also, its longer shelf life could easily be prolonged further — to at least a month — by Metwash (a technology developed by ICAR-CISH Lucknow to prolong the shelf life of fruits).

THE MAKING OF A 'FEARLESS' HYBRID



Neelam
Characteristics | Bright yellow skin, smooth texture, with firm, fibreless flesh; nutrient-rich
Found | South India

Tommy Atkins
Characteristics | Valued for very long shelf life and tolerance of handling
Found | US

What Abhaya got
From Tommy Atkins | Red blush, 12-15-day shelf life
From Neelam | Nutrients, taste, texture

A Thought For Dussehri

Scientists, however, feel that preserving Dussehri — the undisputed king of Malihabad's mangoes — is as important as developing new varieties.

Malihabad has a GI tag for Dussehri. The region has 70,000 hectares under mango cultivation, of the 3.2 lakh hectares under mango production in the whole of UP, and at least 90% of Malihabad's mango produce is Dussehri. But climate change has been a huge worry.

Premature ripening has become a trend in the past few years for Dussehri because of excessive heat. Pest attacks have also become more common.

"This makes conserving Dussehri as important as developing new varieties with better traits," Damodaran says. CISH has identified over 50 clones of Dussehri from different orchards in the Dussehri belt, screened them for quality, and picked the resilient ones for further improvement.

Tackling The Weather

To deal with the impact of weather on mangoes, CISH is working at two levels: first, it is developing climate-resilient techniques, such as using paper bags to shield mangoes against untimely rain and pests that thrive in summer; and second, genetically improved hybrids.

The research on hybrids has made the institute adopt many foreign varieties — with names like Sensation, Eldon and Tommy Atkins — to cross them with Indian mangoes. Orchardist S C Shukla has many foreign varieties growing in his orchard in Lucknow's Para area. "They grow profusely in season with minimal care," he says.

CISH has released four hybrids so far: Ambika, Arunika, Samriddhi and Abhaya, of which Abhaya is the first fully climate-resilient variety.

At least four more varieties are in the trial stage. "Though we have some mango varieties that mature late — such as the Sephasla, in late July — their size is very small. Also, we have observed that the fruits often get blackened skins because of fungus. Hybrids may not have that problem," said Nazimullah, son of Padma Shri Haji Kalimullah, also known as Lucknow's mango man.

Times of Ind Pg 13

ಕುಡಿಯೋಣ ಬಾ ಮಾಚಾ



ಜಪಾನ್ ದೇಶದ ಮಾಚಾ ಚಹಾ ಭಾರತದಲ್ಲೂ ಜನಪ್ರಿಯವಾಗಿದ್ದು, ವಿವಿಧ ಆರೋಗ್ಯ ಪ್ರಯೋಜನಗಳಿಗೆ ಹೆಸರಾಗಿದೆ. ಇದರಂತೆಯೇ ಭಾರತದ ಗಿಡಮೂಲಿಕೆ ಚಹಾಗಳಿಂದಲೂ ಹೆಚ್ಚಿನ ಪ್ರಯೋಜನ ಪಡೆಯಬಹುದು ಎನ್ನುತ್ತಾರೆ ತಜ್ಞರು.

ಸೇತಾವತಿ ಕೃಷ್ಣಮೂರ್ತಿ
netravati.krishnamurthy@timesofindia.com

ಒಂದು ಕಾಲದಲ್ಲಿ ಜಪಾನಿನ ಮನೆಗಳಿಗೆ ಮಾತ್ರ ಸೀಮಿತವಾಗಿದ್ದ ಮಾಚಾ ಚಹಾ ಈಗ ಭಾರತದ ಆರೋಗ್ಯ ಕ್ಷೇತ್ರಕ್ಕೆ ಕಾಲಿಟ್ಟಿದೆ. ವಿಶಿಷ್ಟ ಪರಿಮಳ ಮತ್ತು ರುಚಿಗೆ ಹೆಸರಾದ ಈ ಪೇಯ ಭಾರತ ಮಾತ್ರವಲ್ಲದೆ ಜಗತ್ತಿನಾದ್ಯಂತ ಜನಪ್ರಿಯ ಆಯ್ಕೆಯಾಗಿದೆ. ಪುಡಿ ಮಾಡಿದ ಚಹಾ ಎಂಬ ಅರ್ಥ ಕೊಡುವ ಮಾಚಾ ಸಾಮಾನ್ಯವಾಗಿ ಚಹಾ ತೋಟದಲ್ಲಿ ಎರಡನೇ ಅಥವಾ ಮೂರನೇ ಕೊಯ್ಲಿನಲ್ಲಿ ಪಡೆದ ಎಳೆಯ ಹಸಿರು ಚಹಾ ಎಲೆಗಳಿಂದ ತಯಾರಿಸಿದ ಹಸಿರು ಪುಡಿಯಾಗಿದೆ. ಬೆಳಿಗ್ಗಿನ ಕಾಫಿ ಅಥವಾ ಟೀಗೆ ಪರ್ಯಾಯವಾಗಲು ಪೌಷ್ಟಿಕಾಂಶಭರಿತ ಪೇಯಗಳಿಗೆ ಹುಡುಕಾಡುತ್ತಿರುವ ಮಾಚಾ, ಚಹಾ ಮಾತ್ರವಲ್ಲದೆ ಮಾಚಾ ಮಿಲ್ಕ್ ಟೀ, ಮಾಚಾ ಐಸ್ ಕ್ರೀಮ್, ಮಾಚಾ ಬಬಲ್ ಟೀ ಮೂಲಕವೂ ಚಹಾಪ್ರೇಮಿಗಳಿಗೆ ಹತ್ತಿರವಾಗಿದೆ.

ಆರೋಗ್ಯ ಪ್ರಯೋಜನ: ಮಾಚಾದಲ್ಲಿ ಉತ್ಕರ್ಷಣ ನಿರೋಧಕಗಳು, ವೈಟರ್, ವಿಟಮಿನ್ ಎ, ಸಿ, ಇ, ಕೆ, ಪೊಟಾಷಿಯಂ, ಕ್ಯಾಲ್ಸಿಯಂ, ಕಬ್ಬಿಣಾಂಶ ಅಗತ್ಯ ಜೀವಸತ್ವಗಳು, ಖನಿಜಗಳು ಇವೆ ಎನ್ನುವ ಆಹಾರ ತಜ್ಞೆ ಶೈಲಶ್ರೀ, 'ನೈಸರ್ಗಿಕ ಕೆಫೀನ್, ಅಮೈನೋ ಆಮ್ಲ, ಉತ್ಕರ್ಷಣ ನಿರೋಧಕ, ಕ್ಲೋರೊಫಿಲ್‌ನಂತಹ ಅಂಶಗಳು ಹೃದಯ ರಕ್ತನಾಳದ ಆರೋಗ್ಯ ಉತ್ತೇಜಿಸಲು, ಚಯಾಪಚಯ ಹೆಚ್ಚಿಸಲು ಮತ್ತು ಮಾನಸಿಕ ಸ್ವಾಸ್ಥ್ಯ ಬೆಂಬಲಿಸಲು ಹಾಗೂ ತೂಕ ಇಳಿಕೆಗೆ ಸಹಕಾರಿಯಾಗಿವೆ. ಪ್ರಬಲ ಸೂಪರ್‌ಫುಡ್ ಆಗಿರುವ ಮಾಚಾ ಬಗ್ಗೆ ಕೆಲವು ಅಧ್ಯಯನಗಳು ಇದು ಕೆಲವು ರೀತಿಯ ಕ್ಯಾನ್ಸರ್ ನಿವಾರಣೆಗೆ ಸಹಾಯ ಮಾಡುತ್ತದೆ ಎಂದು ಹೇಳಿವೆ. ವಿವಿಧ ಪ್ರಯೋಜನಗಳ ಹೊರತಾಗಿಯೂ ಆರೋಗ್ಯ ಸಮಸ್ಯೆಗಳಿರುವವರು ತಮ್ಮ ದೇಹದ ಸ್ಥಿತಿ ನೋಡಿಕೊಂಡು ಮಾಚಾ ಚಹಾ ಸೇವಿಸಬಹುದು' ಎನ್ನುತ್ತಾರೆ.



ಭಾರತೀಯ ಪರ್ಯಾಯ: ಈಗ ಮಾಚಾ ಬೆಲೆ 50 ಗ್ರಾಂಗೆ 2000ರಿಂದ 3000 ಸಾವಿರ ರೂ.ಗಳವರೆಗೆ ಇದೆ. ಆದ್ದರಿಂದ ಭಾರತದಲ್ಲಿಯೇ ಸುಲಭವಾಗಿ ಮತ್ತು ಕಡಿಮೆ ಬೆಲೆಗೆ ಲಭ್ಯವಿರುವ ಗಿಡಮೂಲಿಕೆಗಳ ಹಸಿರು ಚಹಾ ಲಭ್ಯವಿರುವಾಗ ಮಾಚಾ ಟೀ ಸೇವನೆ ಅನಿವಾರ್ಯವಲ್ಲ ಎನ್ನುವುದು ಆಹಾರ ತಜ್ಞರ ಅಭಿಪ್ರಾಯ. 'ಭಾರತದಲ್ಲಿ ಅಶ್ವಗಂಧ, ದಾಸವಾಳ, ದಾಲ್ಚಿನ್ನಿ ಅರಿಶಿನ, ಕಂಮಣಸು, ನಿಂಬೆ, ಜೇನುತುಪ್ಪದಿಂದ ತಯಾರಿಸಿದ ನರಳ ಹರ್ಬಲ್ ಚಹಾಗಳ ಆಯ್ಕೆಗಳಿವೆ. ಇವು ಕೂಡ ಉತ್ಕರ್ಷಣ ನಿರೋಧಕ ಮತ್ತು ಪೋಷಕಾಂಶಗಳಿಂದ ಸಮೃದ್ಧವಾಗಿದ್ದು, ಹೆಚ್ಚಿನ ಆರೋಗ್ಯ ಪ್ರಯೋಜನ ನೀಡುತ್ತವೆ' ಎನ್ನುತ್ತಾರೆ ಶೈಲಶ್ರೀ. ■



ಮಾಚಾ ಚಹಾವನ್ನು ದಿನಕ್ಕೆ ಒಂದರಿಂದ ಎರಡು ಬಾರಿ ಸೇವಿಸಬಹುದು. ಅದಕ್ಕಿಂತ ಹೆಚ್ಚು ಬೇಡ. ಕೇವಲ ಒಂದೇ ಆಹಾರದಿಂದ ಎಲ್ಲಾ ರೀತಿಯ ಆರೋಗ್ಯ ಪ್ರಯೋಜನ ಸಿಗುತ್ತದೆ ಎಂಬುದು ತಪ್ಪು ಕಲ್ಪನೆ. ಸಮತೋಲಿತ ಆಹಾರದ ಜತೆ ಮಾಚಾ ಚಹಾ ಸೇವನೆಯಿಂದ ಮತ್ತಷ್ಟು ಪ್ರಯೋಜನ ಪಡೆಯಬಹುದು.

-ಶೈಲಶ್ರೀ | ಆಹಾರ ತಜ್ಞೆ

ಆರೋಗ್ಯ ಪೇಯ

V-karnataka Pg 13

Eco times Pg 10

Britannia Sees Marginal Fall in Net, but Demand Picks Up

MISSES ESTIMATES Co to remain focused on growth, margins amid rising competition: MD

Our Bureau

Bengaluru: Biscuit major Britannia Industries reported a marginal 0.8% year-on-year (y-o-y) drop in standalone net profit at ₹498.3 crore for the first quarter ended June 30, while standalone revenue from operations grew 8.8% to ₹4,452.7 crore.

The performance during the quarter missed Street estimates.

The company did not attribute any reason behind the fall in net profit.

Britannia MD Varun Berry said in the earnings release that there was a marginal uptick in consumption across both urban and rural markets in the quarter under review, underpinned by moderating inflation, which helped (near) double-digit growth after the last few periods.

Berry said as the year progresses, the company's focus will remain on sustaining a healthy growth trajectory while protecting margins amid a heightened competitive landscape across product categories.

"We aim to further reinforce our market leadership through continued investments in brand building and innovations," he said.



REVENUE UP

Consolidated revenue from operations for the quarter went up by 8.8% y-o-y to ₹4,622.2 crore

Britannia's consolidated revenue from operations for the quarter went up by 8.8% y-o-y to ₹4,622.2 crore while net profit grew 3% y-o-y to ₹520.1 crore. Consolidated sales for the quarter grew 9.8% to ₹4,535 crore.

Berry said the company had a robust double-digit growth across our focus markets and in adjacent bakery categories such as rusk, wafers and croissant. He said the company's performance during the quarter underscores the effectiveness of its focused execution strategy — maximising value from existing outlets, more agile servicing to key stores, and driving operational efficiencies across distribution networks.

On Tuesday, Britannia's shares closed 2.7% down on the BSE at ₹5,631.3 apiece.

The results were declared after market hours.

The company in a stock market notice said the board of directors authorised chairman Nusli N Wadia to sign the results, which were submitted to the stock exchanges.

ಲಾಲ್‌ಬಾಗ್‌ನಲ್ಲಿ ನಾಳೆಯಿಂದ 12 ದಿನ ಫಲಪುಷ್ಪ ಪ್ರದರ್ಶನ

ಕಿತ್ತೂರು ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ ವಿಷಯಾಧಾರಿತ ಫಲಪುಷ್ಪ ಪ್ರದರ್ಶನ | 1.75 ಲಕ್ಷಕ್ಕೂ ಅಧಿಕ ಹೂವು ಬಳಕೆ

■ ಉದಯವಾಣಿ ಸಮಾಚಾರ

ಬೆಂಗಳೂರು: ವೀರರಾಣಿ ಕಿತ್ತೂರು ಚನ್ನಮ್ಮ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಿಷಯಾಧಾರಿತ ಸ್ವಾತಂತ್ರ್ಯೋತ್ಸವ 218ನೇ ಫಲಪುಷ್ಪ ಪ್ರದರ್ಶನಕ್ಕೆ ಲಾಲ್‌ಬಾಗ್ ಸಜ್ಜುಗೊಂಡಿದ್ದು, ಆ.7ರಿಂದ 18ರವರೆಗೆ ಸಾರ್ವಜನಿಕರು ಹಲವು ವಿಶೇಷತೆಗಳನ್ನು ಕಣ್ತುಂಬಿಕೊಳ್ಳಬಹುದು.

ಲಾಲ್‌ಬಾಗ್‌ನಲ್ಲಿ ಮಂಗಳವಾರ ಈ ಕುರಿತು ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಕಾರ್ಯದರ್ಶಿ ಡಾ.ಶಮ್ಲಾ ಇಕ್ಬಾಲ್, ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಗುರುವಾರ (ಆ.7) ಬೆಳಿಗ್ಗೆ 10ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಈ ಬಾರಿಯ ಫಲಪುಷ್ಪ ಪ್ರದರ್ಶನಕ್ಕೆ 9ರಿಂದ 10 ಲಕ್ಷಕ್ಕೂ ಹೆಚ್ಚು ವೀಕ್ಷಕರು ಆಗಮಿಸುವ ನಿರೀಕ್ಷೆಯಿದೆ. ಕಲಾಕೃತಿಗಳಿಗೆ ಒಟ್ಟಾರೆ 1.75 ಲಕ್ಷಕ್ಕೂ ಹೆಚ್ಚಿನ ಹೂವು ಬಳಸಲಾಗಿದೆ. ರಜೆ ಅವಧಿಯ ನೇತೃತ್ವದಲ್ಲಿ ಈ ಪರಿಕಲ್ಪನೆ ಕೈಗೊಳ್ಳಲಿದೆ ಎಂದು ಹೇಳಿದರು.

ಕಲೆಗಳ ಪ್ರದರ್ಶನಕ್ಕೆ ಆ.9ರಂದು ಚಾಲನೆ: ಇಕೆಬಾನ, ತರಕಾರಿ ಕಕ್ಷನೆ, ಪುಷ್ಪರಂಗೋಲಿ, ಬೋನ್ಸಾಯ್, ಡಿಷ್ ಹೂವಿನ ಜೋಡಣೆ, ಥಾಯ್ ಆರ್ಟ್, ಜಾನೂರು ಮತ್ತು ಪೂರಕ ಕಲೆಗಳ ಪ್ರದರ್ಶನಕ್ಕೆ ಆ.9ರ ಮಧ್ಯಾಹ್ನ 1 ಗಂಟೆಗೆ ಅನಿವಾಸಿ ಭಾರತೀಯ ಸಮಿತಿ ಅಧ್ಯಕ್ಷೆ ಡಾ.ಆರತಿ ಕೃಷ್ಣ ಚಾಲನೆ ನೀಡಲಿದ್ದಾರೆ ಎಂದರು.



ಲಾಲ್‌ಬಾಗ್ ನಲ್ಲಿ ಪುಷ್ಪಗಳಿಂದ ಕಿತ್ತೂರು ರಾಣಿ ಚನ್ನಮ್ಮ ಕಲಾಕೃತಿ ನಿರ್ಮಿಸುತ್ತಿರುವುದು.

ಪ್ರವೇಶ ಶುಲ್ಕದ ವಿವರ

ಸಾಮಾನ್ಯ ದಿನಗಳಲ್ಲಿ ವಯಸ್ಕರಿಗೆ 80 ರೂ. ಹಾಗೂ ಶನಿವಾರ ಹಾಗೂ ರಜಾ ದಿನಗಳಲ್ಲಿ 100 ರೂ. ಇರಲಿದೆ. ಮಕ್ಕಳಿಗೆ (12 ವರ್ಷದೊಳಗಿನವರಿಗೆ) 30 ರೂ. ಇರಲಿದೆ. ಶಾಲಾ ಸಮವಸ್ತ್ರ ಧರಿಸುವ ಬರುವ 10ನೇ ತರಗತಿವರೆಗಿನ ಎಲ್ಲ ಶಾಲಾ ಮಕ್ಕಳಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ. ಆನ್‌ಲೈನ್ ಟಿಕೆಟ್ ಬುಕಿಂಗ್ ಸೌಲಭ್ಯ ಲಭ್ಯವಿದೆ. https://hasiru.karnataka.gov.in/floweshow/login.aspx ಭೇಟಿ ನೀಡಬಹುದು.

ವಾಹನ ನಿಲುಗಡೆಗೆ ಅವಕಾಶ

ಜೋಡಿ ರಸ್ತೆಯ ಶಾಂತಿನಗರ ಬಸ್ ನಿಲ್ದಾಣದ ಬಳಿ ಇರುವ ಬಹುಮಹಡಿ ವಾಹನ ನಿಲುಗಡೆ (ಮಲ್ಲಿಸ್ವೀರಿ ಪಾರ್ಕಿಂಗ್), ಜೋಡಿ ರಸ್ತೆ ಬಳಿಯ ಹಾಪ್ ಕಾಮ್ಸ್ ಆವರಣ, ಜೆ.ಸಿ. ರಸ್ತೆಯಲ್ಲಿನ ಬಿಬಿಎಂಪಿ ಬಹುಮಹಡಿ ವಾಹನ ನಿಲುಗಡೆ ಪ್ರದೇಶದಲ್ಲಿ ವಾಹನಗಳನ್ನು ನಿಲುಗಡೆಗೆ ಅವಕಾಶ.

ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ

ಬೆಂಗಳೂರು ದಕ್ಷಿಣ ವ್ಯಾಪ್ತಿಗೆ ಸೇರುವ ಸರ್ಕಾರಿ/ಖಾಸಗಿ ಪ್ರೌಢಶಾಲಾ ಮಕ್ಕಳಿಗೆ (7, 8 ಮತ್ತು 9ನೇ ತರಗತಿಗೆ ಸೇರಿದ ಪ್ರತಿ ತರಗತಿಗೆ 40 ರಂತೆ ಒಟ್ಟಾರೆ 120 ವಿದ್ಯಾರ್ಥಿಗಳಿಗೆ) ಜುಲೈ 10ರಂದು ಬೆಳಿಗ್ಗೆ 11 ಗಂಟೆಗೆ ಲಾಲ್ ಬಾಗ್ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ರಾಣಿ ಚನ್ನಮ್ಮ ಸಂಗೊಳ್ಳಿ ರಾಯಣ್ಣನವರ ಬಗ್ಗೆ ಪ್ರಬಂಧ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.

ಕಿತ್ತೂರು ಸಂಸ್ಥಾನದ ಕೋಟೆಯ ಪ್ರತಿನಿಧಿಕ ಪುಷ್ಪ ಮಾದರಿ: ರಾಣಿ ಚನ್ನಮ್ಮ ಸಂಗೊಳ್ಳಿ ರಾಯಣ್ಣ ಅವರ ಕಾರ್ಯಕ್ಷೇತ್ರದ ಕೇಂದ್ರಬಿಂದುವಾಗಿದ್ದ ಕಿತ್ತೂರು ಕೋಟೆಯನ್ನು ಪ್ರತಿನಿಧಿಸುವ ಕೋಟೆಯ ಪುಷ್ಪ ಮಾದರಿ ಗಾಜಿನಮನೆಯ ಕೇಂದ್ರಭಾಗದಲ್ಲಿ ಕಂಗೊಳಿಸಲಿದೆ. ಕೋಟೆಯ ಪುಷ್ಪ ಮಾದರಿಯ ಮೇಲೆ ಕಿತ್ತೂರಿನ ರಾಜಲಾಂಛನವಿರುತ್ತದೆ. ಕೋಟೆಯ ಬುರುಜಿನ ಮೇಲೆ ಕಿತ್ತೂರು ಸಂಸ್ಥಾನದ ಬಾವುಟ ಇರಲಿದೆ. 34 ಅಡಿ ಸುತ್ತಳತೆ ಹಾಗೂ 18 ಅಡಿ ಎತ್ತರದ 2,800 ಚದುರ ಅಡಿ ಪ್ರದೇಶದಲ್ಲಿ ಕಿತ್ತೂರಿನ ಕೋಟೆ ಮಾದರಿಯ ಪುಷ್ಪ ಪ್ರತಿರೂಪ ತಲೆ ಎತ್ತಲಿದೆ. ಈ ಕಾರ್ಯಕ್ಕೆ 60 ನುರಿತ ಪರಿಣತ ಕಾರ್ಮಿಕರು ಕಾರ್ಯ ನಿರ್ವಹಿಸಲಿದ್ದಾರೆ.

ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್. ರಮೇಶ್ ಮಾತನಾಡಿ, ಬೃಹತ್ ಕೋಟೆ ಪುಷ್ಪ ಕಲಾಕೃತಿಯ ಮುಂಭಾಗದ ಒಂದು ಬದಿಯಲ್ಲಿ ಸುಮಾರು 10 ಅಡಿ ಎತ್ತರದ ಆತ್ಮಾರೂಢ ರಾಣಿ ಚನ್ನಮ್ಮನವರ ಪ್ರತಿಮೆ ಸುಮಾರು 6 ಅಡಿಗಳ ಮೇಲೆ ಆನಾವರಣಗೊಳ್ಳಲಿದೆ. ರಾಣಿ ಚನ್ನಮ್ಮನವರ ಹೋರಾಟದ ಬದುಕನ್ನು ಪ್ರತಿಬಿಂಬಿಸುವ ಕಲಾಕೃತಿ ಇದಾಗಿರಲಿದೆ. ಇನ್ನೊಂದು ಬದಿಯಲ್ಲಿ ಆಂಗ್ಲರ ವಿರುದ್ಧದ ಹೋರಾಟವನ್ನು ಸಾಂಕೇತಿಸುವ ವಿಷ್ಣುಧಾರಿ ವೀರ ಸಂಗೊಳ್ಳಿ ರಾಯಣ್ಣ ನಿಂತಿರುವ ಪ್ರತಿಮೆಯು ಆನಾವರಣಗೊಳ್ಳಲಿದೆ ಎಂದರು.

ಗಾಜಿನ ಮನೆಯ ಹೊರಾಂಗಣದ ವಿಶೇಷತೆ: ಎಲ್.ಇ.ಡಿ. ಸ್ಕ್ರೀನ್‌ಗಳನ್ನು ಬಳಸಿ ಲಾಲ್‌ಬಾಗ್ ಆಯ್ದ 10 ಜಾಗಗಳಲ್ಲಿ ರಾಣಿ ಚನ್ನಮ್ಮ ಸಂಗೊಳ್ಳಿ ರಾಯಣ್ಣ ಮೊದಲಾದವರ ಹೋರಾಟಗಳನ್ನು ಸಾರುವ ವಿಡಿಯೋ ತುಣುಕುಗಳು, ಚಿತ್ರಗಳು. ಫಲಪುಷ್ಪ ಪ್ರದರ್ಶನದ ಅವಧಿಯುದ್ದಕ್ಕೂ ಪ್ರದರ್ಶನಗೊಳ್ಳಲಿವೆ. ಗಾಜಿನ ಮನೆಯ ಹೊರಾವರಣದ ಹುಲ್ಲುಹಾಸಿನ ನಾಲ್ಕು ಮೂಲೆಗಳಲ್ಲಿ ರಾಣಿ ಚನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣನವರ ಚಿತ್ರಕಲಾಕೃತಿಗಳನ್ನು ಬಿದಿರಿನ ಫೋಟೋ ಫ್ರೇಮುಗಳಲ್ಲಿ ಸಂಯೋಜಿಸಿ ಪ್ರದರ್ಶಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

Udayavani
Pg 08



Preparations on for the flower show, which will be on from August 7 to 18. DH PHOTO/RANJU P

I-Day: Lalbagh's 218th flower show to honour K'taka's freedom fighters

SHRADDHA S
BENGALURU, DHNS

Lalbagh's 218th flower show, themed 'Tribute to Rani Chennamma and Sangolli Rayanna', will be held from August 7 to 18.

This year's highlight is a 2,800 sqft floral replica of Kittur Fort inside the Glass House, alongside statues, portraits, floral pyramids, and exotic flower displays using over 50 lakh blooms. The exhibit celebrates Karnataka's freedom fighters and brave women through 10 floral pyramids, visual panels, and a vertical garden featuring the National Emblem.

Outside the Glass House, attractions include LED screens, heart-shaped arches, framed portraits, vertical gardens, and floral flow beds. The seasonal garden will feature 31.5 lakh floral elements. Events include student essay contests, floral art displays, and plant fairs.

To enhance visitor comfort, a mist-cooling system has been installed. Safety and hygiene measures include 136 CCTV cameras, door frame detectors, 12 new water booths, first aid, and animal safety provisions.

Plastic use is banned, and special parking, cloakrooms, and shuttle services will be arranged. Photography is allowed at designated spots.

Visitors are urged to follow garden rules and help maintain a clean, eco-friendly environment.

Hindu
Pg 03

ತೊಗರಿಗೆ ಕಲರ್ ಕುಣಿಕೆ

● ವೆಂಕಟೇಶ ಏಗನೂರು

ತೊಗರಿ ಬೇಳೆ ಸಾರು, ಸಾಂಬಾರು, ದಾಲ್ ಯಾರಿಗೆ ರುಚಿಸದು? ಆರೋಗ್ಯಕ್ಕೆ ಬೇಕಾದ ನಾನಾ ಪೋಷಕಾಂಶಗಳನ್ನೂ ಒಳಗೊಂಡಿರುವ ಈ ಬೇಳೆ ಕಾಳು ವಿಪರೀತ ರಾಸಾಯನಿಕ ಉಂಡು ಬೆಳೆದು, ಕೃತಕ ಬಣ್ಣವನ್ನೂ ಮೆತ್ತಿಕೊಳ್ಳುತ್ತಿರುವುದು ಆತಂಕದ ಸಂಗತಿಯೇ ಸರಿ.



ತೊಗರಿಯನ್ನು ಬೇಳೆ ಮಾಡಿ ಪಾಲಿಶ್ ಮಾಡುವಾಗಲೇ ಕಲರ್ ಸೇರಿಸುವುದಿದೆ. ಟೆಟ್ರಾಜಿನ್, ಪೆಟ್ರೋಲಿಯಂ ಕಲರ್, ಸನ್ ಸೆಟ್ ಯಲ್ಲೋ ಇತ್ಯಾದಿ ಬಣ್ಣ ಸೇರಿಸಲಾಗುತ್ತದೆ. ಗ್ರಾಹಕರನ್ನು ಆಕರ್ಷಿಸಲು ಸೇರಿಸುವ ಕಲರ್‌ನಲ್ಲಿ ಇರುವ ರಾಸಾಯನಿಕಗಳು ಉದರ ಸೇರಿದರೆ ಕ್ಯಾನ್ಸರ್‌ಗೆ ಕಾರಣವಾಗಬಹುದು. ನರ, ಮಾಂಸಖಂಡಗಳ ಮೇಲೂ ದುಷ್ಪರಿಣಾಮ ಬೀರಬಲ್ಲದು ಎಂದು ವೈದ್ಯರು ಎಚ್ಚರಿಸಿದ್ದಾರೆ.



20ಕ್ಕೂ ಅಧಿಕ ಬಗೆ ರಾಸಾಯನಿಕ

ತೊಗರಿ ಬೇಳೆ

ತೊಗರಿಗೆ ಹಸಿರು ಕಾಯಿ ಕೊರಕ ರೋಗ, ರಸ ಹೀರುವ ಕೀಟ, ಬಲೆ ಕಟ್ಟುವ ಕೀಡೆ, ಕಾಯಿ ನೊಣ, ಎಲೆಚುಕ್ಕೆ ರೋಗ, ಒಣಬೇರು ಕೊಳೆ ರೋಗ, ಮಚ್ಚೆ ರೋಗ, ನೆಟೆ ರೋಗ ಬಾಧೆಯಿದೆ. ತೊಗರಿಗೆ ಹುಳ ಬೀಳದಿರಲು ಪ್ರೋಸನ್‌ಫಾಸ್ಟ್, ಕೊರೊಜಿನ್ ಸೇರಿದಂತೆ 20 ಬಗೆಯ ಕೀಟನಾಶಕ ಸಿಂಪಡಣೆ ಮಾಡಲಾಗುತ್ತದೆ. ಕಪ್ಪು ಚುಕ್ಕೆಗೆ ಕಾರ್ಬನ್ ಡೈಜಿಂ, ಮರುಕು ಅಥವಾ ಜೊಂಡಿ ಕಟು ರೋಗ ನಿಯಂತ್ರಿಸಲು ಕಾರ್ಟಾಪ್ ಹೈಟೊಕ್ಲೋರೈಡ್ ಸಿಂಪಡಣೆ ಮಾಡಲಾಗುತ್ತದೆ. ರೋಗ- ಕೀಟ ಬೇಗ ನಿಯಂತ್ರಣಕ್ಕೆ ಬರಲಿ ಎಂದು ಎರಡು ಬಗೆ ಪೀಡೆನಾಶಕ ಸೇರಿಸಿ ಸಿಂಪಡಣೆ ಮಾಡುವ ತಪ್ಪು ಕ್ರಮದಿಂದಲೂ ತೊಗರಿ ಬೇಳೆಯಲ್ಲಿ ವಿಷ ಉಳಿಯುವಂತಾಗಿದೆ.

ಆರೋಗ್ಯಕಾರಿ ಗುಣಗಳು

ತೊಗರಿ ಬೇಳೆಯಲ್ಲಿ ಹೆಚ್ಚಿನ ಪ್ರೊಟೀನ್, ಫೈಬರ್ ಅಂಶವಿದೆ. ವಿಟಮಿನ್ ಬಿ, ಮೆಗ್ನೀಶಿಯಂ, ಸತು ಮತ್ತು ಪೊಟ್ಯಾಶಿಯಂ ಇದೆ. ತೊಗರಿ ಅಥವಾ ಬೇಳೆಯನ್ನು ಸಾಂಬಾರ್, ದಾಲ್‌ಗೆ ಬಳಸುವ ಮುನ್ನ ನೀರಿನಲ್ಲಿ ಚೆನ್ನಾಗಿ ತೊಳೆಯಬೇಕು. ಚೆನ್ನಾಗಿ ಕುದಿಸಿ ಸೇವಿಸಿದರೆ ಅಪಾಯವಿಲ್ಲ ಎಂದು ತಜ್ಞರು ಹೇಳುತ್ತಾರೆ.



ತೊಗರಿ ಬೆಳೆಯಲು ಶಿಫಾರಸು ಪ್ರಮಾಣಕ್ಕಿಂತ ಅಧಿಕ ರಸಗೊಬ್ಬರ, ಪೀಡೆನಾಶಕ ಸಿಂಪಡಣೆ ಮಾಡಲಾಗುತ್ತದೆ. ಹೀಗೆ ಮಾಡುವುದು ತಪ್ಪು. ಪೀಡೆ ನಿಯಂತ್ರಣಕ್ಕೆ ಎಷ್ಟು ಬೇಕೋ ಅಷ್ಟೇ ಸಿಂಪಡಣೆ ಸೂಕ್ತ. ಸಿಂಪಡಣೆ ಮಾಡಿದ ರಾಸಾಯನಿಕ ಶೇಷ ತೊಗರಿಯಲ್ಲಿ ಒಂದು ತಿಂಗಳ ಕಾಲ ಇರುತ್ತದೆ.

- ರಾಜು ತೆಗ್ಗಳ್ಳಿ ಮುಖ್ಯಸ್ಥರು, ಕೆವಿಕೆ ಕಲಬುರಗಿ

S-karnataka
Pg 08

V-karnataka
Pg 04



ಗೋವಿನಜೋಳ ಉತ್ಪಾದನೆ ಏರುಗತಿ
ರಫ್ತು ವಹಿವಾಟು ಮಂದಗತಿ

ಭಾರತದಲ್ಲಿ ಗೋವಿನಜೋಳ ಉತ್ಪಾದನೆ ಹೆಚ್ಚಾಗಿದ್ದರೂ ಆಮದಿಗೆ ಹೆಚ್ಚಿನ ಅವಕಾಶ ನೀಡುತ್ತಿರುವುದು ಅಚ್ಚರಿಯ ಸಂಗತಿಯಾಗಿದೆ. ಪಶು ಆಹಾರ, ಸ್ಟಾರ್ಚ್ ಹಾಗೂ ಎಥನಾಲ್ ಉತ್ಪಾದನೆಗೆ ಗೋವಿನಜೋಳಕ್ಕೆ ಅಧಿಕ ಬೇಡಿಕೆ ಬಂದಿರುವುದೇ ಆಮದು ಹೆಚ್ಚಲು ಕಾರಣ ಎನ್ನಲಾಗಿದೆ.

ಈ ವರ್ಷ ಜಾಗತಿಕ ಮಟ್ಟದಲ್ಲಿ ಗೋವಿನಜೋಳ ಉತ್ಪಾದನೆ ಹೆಚ್ಚಾಗಲಿದೆ ಎಂದು ಅಂದಾಜಿಸಲಾಗಿದ್ದು, ಬೆಲೆ ಪರಿಸ್ಥಿತಿ ಮಂದಗತಿಯಲ್ಲಿರುವದೆಂದು ಹೇಳಲಾಗಿದೆ. ವಿಶೇಷವಾಗಿ ಅಮೆರಿಕ, ಬ್ರೆಜಿಲ್ ಹಾಗೂ ಭಾರತಗಳಲ್ಲಿ ಭರಪೂರ ಇಳುವರಿ ನಿರೀಕ್ಷಿಸಲಾಗಿದೆ ಎಂದು ವಿವಿಧ ಮೂಲಗಳಿಂದ ತಿಳಿದುಬಂದಿದೆ.

ಬ್ರೆಜಿಲ್ ಮತ್ತು ಭಾರತದಲ್ಲಿ ಅಧಿಕ ಉತ್ಪಾದನೆ ಸಾಧ್ಯತೆಯ ಹಿನ್ನೆಲೆಯಲ್ಲಿ ಎಎಂಐಎಸ್(ಕೃಷಿ ಮಾರುಕಟ್ಟೆ ಮಾಹಿತಿ ವ್ಯವಸ್ಥೆ) ಪ್ರಸಕ್ತ 2025ರ ಗೋವಿನಜೋಳ ಉತ್ಪಾದನಾ ಅಂದಾಜನ್ನು ಹೆಚ್ಚಿಸಿದೆ. 2024ರಲ್ಲಿದ್ದ ಮಟ್ಟಕ್ಕೆ ಹೋಲಿಸಿದರೆ ಉತ್ಪಾದನೆ ಶೇ.3.8ರಷ್ಟು ಹೆಚ್ಚುವ ನಿರೀಕ್ಷೆ ಇದೆ ಎಂದು ತಿಳಿಸಿದೆ. ಅಮೆರಿಕದ ಕೃಷಿ ಇಲಾಖೆ ಕೂಡ ಇದಕ್ಕೆ ಶ್ರುತಿಗೂಡಿಸಿದೆ. 2025–26ನೇ ಸಾಲಿನಲ್ಲಿ ಜಾಗತಿಕ ಗೋವಿನಜೋಳ ಉತ್ಪಾದನೆ 1.3 ಶತಕೋಟಿ ಟನ್‌ದಷ್ಟಾಗಲಿದ್ದು, ಕಳೆದ ವರ್ಷದಲ್ಲಾಗಿದ್ದಕ್ಕಿಂತ ಶೇ.3.7ರಷ್ಟು ಹೆಚ್ಚಳವಾಗಲಿದೆ ಎಂದು ಕೆಲವು ಸಂಶೋಧನಾ ಏಜೆನ್ಸಿಗಳು ತಿಳಿಸಿವೆ. ಅದರಂತೆ ಅಮೆರಿಕದಲ್ಲಿ ಕೂಡ ಗೋವಿನಜೋಳ ಇಳುವರಿ 400 ದಶಲಕ್ಷ ಟನ್‌ದಷ್ಟಾಗಲಿದೆ ಎಂದು ಅಂದಾಜಿಸಲಾಗಿದೆ. ಇದಿಷ್ಟು ಉತ್ಪಾದನೆಯ ಮಾತಾಯಿತು. ಈ ವರ್ಷ ಬಳಕೆಯೂ ಜಾಸ್ತಿಯಾಗಲಿದೆ ಎಂದು ಹೇಳಲಾಗುತ್ತಿದ್ದು, 1.27 ಶತಕೋಟಿ ಟನ್‌ದಷ್ಟಾಗಲಿದೆ ಎಂದು ಬಿಎಂಐ ಸಂಸ್ಥೆಯು ತಿಳಿಸಿದೆ. 2024–25ರಲ್ಲಿದ್ದ ಪ್ರಮಾಣಕ್ಕಿಂತ ಶೇ.1.5ಕ್ಕಿಂತ ಹೆಚ್ಚು ಎನ್ನಲಾಗಿದೆ.

2024–25ನೇ ಸಾಲಿನಲ್ಲಿ ಗೋವಿನಜೋಳ ಆಮದು 9.7 ಲಕ್ಷ ಟನ್‌ದಷ್ಟಾಗಿ ದಾಖಲೆ ನಿರ್ಮಿಸಿದೆ. 2023–24ರಲ್ಲಾಗಿದ್ದ 1.37 ಲಕ್ಷ ಟನ್‌ಗಿಂತ ಆರು ಪಟ್ಟು ಹೆಚ್ಚು ಎನ್ನಲಾಗಿದೆ. ಆದರೆ ರಫ್ತು ಮಾತ್ರ ಮಂದಗತಿಯಲ್ಲಿದೆ. ಪಶು ಆಹಾರ, ಸ್ಟಾರ್ಚ್ ಹಾಗೂ ಎಥನಾಲ್ ಉತ್ಪಾದನೆಗೆ ಗೋವಿನಜೋಳಕ್ಕೆ ಅಧಿಕ ಬೇಡಿಕೆ ಬಂದಿರುವುದೇ ಆಮದು ಹೆಚ್ಚಲು ಕಾರಣ ಎನ್ನಲಾಗಿದೆ. ಈ ಅವಧಿಯಲ್ಲಿ ಗೋವಿನಜೋಳ ರಫ್ತು 5.56 ಲಕ್ಷ ಟನ್‌ದಷ್ಟಾಗಿ ಶೇ.61ರಷ್ಟು ಇಳಿಕೆಯಾಗಿದೆ. 2022–23ರಲ್ಲಾಗಿದ್ದ 34.53 ಲಕ್ಷ ಟನ್‌ಗೆ ಹೋಲಿಸಿದರೆ ಗಣನೀಯವಾಗಿ ಕುಸಿದಿದೆ.



- ಉತ್ಪಾದನೆಯೊಂದಿಗೆ ಬಳಕೆಯೂ ಹೆಚ್ಚಳ
- ಆಮದು ಏರಿಕೆ
- ರಫ್ತು ಇಳಿಮುಖ

ದೇಶೀಯ ಮಟ್ಟದಲ್ಲಿ ಉತ್ಪಾದನೆ ಹೆಚ್ಚಾಗಿದ್ದರೂ, ಆಮದು ಹೆಚ್ಚಾಗಿರುವುದು ಅಚ್ಚರಿಯ ಸಂಗತಿಯಾಗಿದೆ. ಮೂರನೇ ಬಾರಿಯ ಅಂದಾಜಿನ ಪ್ರಕಾರ ದೇಶದಲ್ಲಿ 422.81 ಲಕ್ಷ ಟನ್ ಗೋವಿನಜೋಳ ಉತ್ಪಾದನೆಯಾಗಿದೆ. ಕಳೆದೊಂದು ದಶಕದ ಅವಧಿಯಲ್ಲಿ ಉತ್ಪಾದನೆ ದುಪ್ಪಟ್ಟಾಗಿದೆ. 2015–16ರಲ್ಲಿ ಉತ್ಪಾದನೆ ಸುಮಾರು 225.67 ಲಕ್ಷ ಟನ್‌ದಷ್ಟಾಗಿದೆ. ಈ ಮೊದಲು ಭಾರತ ಏಷ್ಯದಲ್ಲೇ ಪ್ರಮುಖ ಗೋವಿನಜೋಳ ರಫ್ತುದಾರ ರಾಷ್ಟ್ರವೆಂದು ಹೆಸರುವಾಸಿಯಾಗಿತ್ತು. ಆದರೆ ಇತ್ತೀಚೆಗೆ ಆಮದು ಹೆಚ್ಚಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ವಿವಿಧ ಕಾರಣಗಳಿಂದಾಗಿ ಉತ್ಪಾದನೆಗಿಂತ ಬೇಡಿಕೆ ಹೆಚ್ಚಾಗಿರುವುದೇ ಆಮದು ಹೆಚ್ಚಲು ಕಾರಣವೆನ್ನಲಾಗಿದೆ.

'Ethanol blending lowers mileage'

Govt claims 6% fall in mileage; consumers & some experts believe impact to be a little higher

ARSHAD KHAN @ New Delhi



AMID concerns and debates that ethanol blending in petrol has significantly reduced fuel efficiency and accelerated wear and tear of vehicle parts, the Ministry of Petroleum and Natural Gas recently addressed the impact of 20% ethanol blending (E20) on vehicle performance.

The Ministry confirmed that ethanol has a lower energy density than petrol, which can cause a slight decrease in mileage. Four-wheelers designed for E10 and calibrated for E20 may experience a 1–2% drop in mileage, while other vehicles may see a reduction of 3–6%

While the government's claim of up to 6% reduction in mileage on older vehicles suggests a very limited impact, consumers and some experts believe the impact on mileage to be a little higher. "By its chemical composition, ethanol has lower energy per unit volume than petrol. This results in reduced fuel efficiency from any ethanol-blended petrol when compared to unadulterated petrol. While our internal estimate shows that E20 petrol gives 5-7% lower mileage than unadulterated petrol, primarily in vehicles manufactured before 2023, consumer feedback suggests the impact to be in double digits in real-world driving conditions," said the head technical officer of a leading car company on the condition of anonymity.

He advocated a discount for consumers on blended petrol given that ethanol is sourced locally and is much cheaper than crude. He said that this may compensate for the increased running costs.

The administered ex-mill price of ethanol for blending purpose has been fixed at Rs 57.97 per litre. A GST of 5% levied on ethanol for blending with petrol, taking the per litre price to ₹61. Petrol is priced around ₹95 per lite (in Delhi).

India's Petroleum Ministry said E20 blending has boosted India's energy security by reducing crude oil imports. Since 2014–15, over Rs 1.4 lakh crore has been saved in foreign exchange, claims the government. In a survey conducted by LocalCircles which received over 36,000 responses from petrol vehicle owners, 11% of respondents (out of 22,282 responses received), said that the fuel efficiency/ mileage has reduced by over 20%. As many as 22% respondents stated it has reduced by 15-20% and 11% of respondents stated it has reduced by 10-15%.

Ind Exp Pg 13

B'LURU TO GET NEW 1.5KM TUNNEL ROAD: ESTEEM MALL TO GKVK

EXPRESS NEWS SERVICE @ Bengaluru

DEPUTY Chief Minister and Bengaluru Development Minister DK Shivakumar said the State government is planning a 1.5-km tunnel road from Esteem Mall in Hebbal to GKVK University. "The new tunnel road will be dug from Hebbal-Nagavara Esteem Mall to GKVK University. It will be presented before the cabinet soon. This tunnel road is different, the 1.5-km road will be completed in two years," he said.

The minister's comment comes at a time when there is debate over the twin tunnel costing over Rs 40,000 crore, connecting Hebbal to Central Silk Board Junction, and KR Puram to Mysuru Road.

The minister's remarks came during his inspection of the newly constructed ramp at Hebbal Junction along with Urban Development Minister and Hebbal MLA Byrathi Suresh, on Tuesday. He announced that the much-anticipated stretch will be inaugurated by August 15, allowing traffic to resume.

Addressing the media, the DCM said, "The inauguration will be done after consulting the chief minister for a date, and will be inaugurated by August 15. For now, the ramp from KR Puram side towards Mehkri Circle will be inaugurated. The other side of the ramp will be opened for traffic later."

Asked about several companies, including the Adani Group, expressing interest in building the tunnel road project, the DCM said anyone can participate. He also spoke about the asphalting of roads in Bengaluru and said, "No matter how much development is done, it is not enough. We have given some deadlines to officials on this," he said.

> **The new tunnel road will be dug from Hebbal-Nagavara Esteem Mall to GKVK University. It will be presented before the cabinet soon. This tunnel road is different, the 1.5-km road will be completed in 2 years**
>
> DK Shivakumar, DCM

GOVINDA REDDY IS MD OF K-RIDE

The Karnataka Government has appointed IAS officer Govinda Reddy as MD of Rail Infrastructure Development Company (Karnataka) Limited (K-RIDE). An official order issued on Monday said Reddy, a 2013-batch IAS officer currently serving as Joint Secretary, Infrastructure Development, Ports and Inland Water Transport Department, will hold concurrent charge as K-RIDE MD. He replaces Manjula N.

Ind Exp Pg 04

ಮೀನುಮರಿ ಪಾಲನೆಗೆ ಸಹಾಯಧನ: ಅರ್ಜಿ ಆಹ್ವಾನ

ರಾಮನಗರ: 2024–25ನೇ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಮೀನುಮರಿ ಪಾಲನೆ, ಕೊಳಗಳ ನಿರ್ಮಾಣ, ಮೀನು ಕೃಷಿ ಕೊಳಗಳ ನಿರ್ಮಾಣ ಮತ್ತು ಹೂಡಿಕೆ ವೆಚ್ಚಗಳಿಗೆ ಸಹಾಯಧನ, ಮೀನುಮರಿ ಉತ್ಪಾದನಾ ಕೇಂದ್ರಗಳ ಸ್ಥಾಪನೆಗೆ (ಶುದ್ಧ ನೀರಿನ ಮೀನುಮರಿ ಘಟಕ) ಸಹಾಯಧನ ನೀಡಲು ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಅರ್ಜಿ ನಮೂನೆಯನ್ನು ಸಂಬಂಧಿಸಿದ ತಾಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗಳಿಂದ ಪಡೆದು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಆ.16ರೊಳಗೆ ಕಚೇರಿಯ ವೇಳೆಯಲ್ಲಿ ಸಂಬಂಧಪಟ್ಟ ತಾಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು.

S-karnataka Pg 02

ಹೆಚ್ಚಿನ ಮಾಹಿತಿಗೆ ಮೀನುಗಾರಿಕೆ ಸಹಾಯಕ ನಿರ್ದೇಶಕರು, ರಾಮನಗರ ತಾಲೂಕು ಮೊ:9880347733 ಮೀನುಗಾರಿಕೆ ಸಹಾಯಕ ನಿರ್ದೇಶಕರು, ಚನ್ನಪಟ್ಟಣ ತಾಲೂಕು ಮೊ: 7795621180 ಮತ್ತು ಮೀನುಗಾರಿಕೆ ಸಹಾಯಕ ನಿರ್ದೇಶಕರು, ಕನಕಪುರ ತಾಲೂಕು ಮೊ:8618277242 ಮೀನುಗಾರಿಕೆ ಸಹಾಯಕ ನಿರ್ದೇಶಕರು, ಮಾಗಡಿ ತಾಲೂಕು ಮೊ:7795621180 ಹಾಗೂ ಮೀನುಗಾರಿಕೆ ಉಪನಿರ್ದೇಶಕರು, ಬೆಂಗಳೂರು ದಕ್ಷಿಣ ಜಿಲ್ಲೆ. ಮೊ:9448655014, ಇವರನ್ನು ಸಂಪರ್ಕಿಸುವಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ಮೀನುಗಾರಿಕೆ ಉಪ ನಿರ್ದೇಶಕರು ತಿಳಿಸಿದ್ದಾರೆ.